

ನೂರು ಸೇರಿಸಿ, ''ಇದು ಲೆಕ್ಕಕ್ಕಲ್ಲ, ಹೀಗೇ ಕೊಡ್ತಿದೀನಿ, ಮಕ್ಕಳಿಗೆ ತಿಂಡಿ ಕೊಡಿಸು'' ಎನ್ನುತ್ತ ಅನಘಾ ಇನ್ನೂರು ರೂಪಾಯಿಯನ್ನು ಬಸವಣ್ಣಿಯ ಕೈಗಿಟ್ಟು ಅವಳು ತೊಳೆದಿಟ್ಟ ಪಾತ್ರೆಗಳನ್ನು ಶೆಲ್ಫಿಗೆ ಜೋಡಿಸತೊಡಗಿದಳು.

''ಗಂಡ ಬರ್ತೀದ್ದಾನೇನು ತೇರಿಗೆ'' ಎಂದರೆ–

"ಆ ಹಡ್ಬಿ ನನ್ಮಗ ಕುಡದು ಯಾವ ಗಟಾರದಾಗ ಬಿದ್ದಾನ ಯಾರ ಹುಡಕಾಕ ಹೊಕ್ಕಾರ... ಮೂರ ದಿನಾ ಆತು ಮನೀಗ ಬರದೇ... ಅಂವಾ ಬರ್ತಾನ, ನಂಗ ನನ್ ಮಕ್ಕಿಗ ಜಾತ್ರಿ ಹಬ್ಬ ಅಂತ ಒಯ್ತಾನ ಅಂತ ಕೂತಿದ್ರ ನಾವು ಆ ವಾಲ್ಮೀಕಿ ಮುನೀಗ ಹುತ್ತಾ ಬೆಳದಿತ್ತಲ್ರಿ, ಹಂಗ ಮನ್ಯಾಗ ಹುತ್ತದ ಗುಮ್ಮ ಆಗಿ ಹೋಗಬೇಕಾದೀತು ತಗಳ್ರಿ... ಬಸ್ಸಿಗೀಗ ಹೆಂಗೂ ರೊಕ್ಕಿಲ್ಲ... ನಾವ ಐದಾರ ಹೆಂಗಸ್ರ ಕೂಡ ಮಕ್ಕಳ ಮರಿ ಕರ್ಕೊಂಡ ಹೊಂಟೀವ್ರೀ... ಅವನ ಜತಿ ಹೋದ್ರ ಅವನ ಬಸ್ಸಿನ ತಿಕಟಗ ನಾನೇ ಹಣಾ ಹಾಕಿ ಮತ್ತ್ ಅವನ ಖರ್ಚಿಗ ರೊಕ್ಕಾನೂ ನಾನ ಕೊಡಬೇಕ್ಕಾಕ್ಕತ್ರಿ... ಅಲ್ಲೂ ಕುಡ್ಕಂಡು ತಕಧಿಮಿ ಕುಣದ್ರೂ ಕುಣದನೇ... ಮಕ್ಕಳೂ ಅಪ್ಪನ ಅವತಾರ ನೋಡಿ ಸಪ್ಪೆಯಾಗ್ತಾವ... ಜಾತ್ರಿ ಖುಷೀನೂ ದಕ್ಕದಂಗ ಆಗಬಿಡ್ತೇತ್ರಿ... ಹಂಗಾಗಿ ಉಸಾಬರಿ ಬ್ಯಾಡಂತ ಸುಮ್ಮನಾಗೇನಿ..."

"ಇತ್ತತ್ತ ಬನ್ರಿ.. ನಾ ಒರೆಸಿ ಇಡ್ತೆನಿ ಪಾತ್ರೆ. ಕೈ ಉಬ್ಬೇತ್ರಿ ನಿಮ್ದು... ಅದೇ ಕೈಯಾಗ ಏನ್ ಕೆಲ್ಸ ಮಾಡಾಕತ್ತೀರಿ ನೀವು" ಎನ್ನುತ್ತ ತನ್ನೆಡೆಗೆ ಪಾತ್ರೆ ಬುಟ್ಟಿ ಸರಿಸಿಕೊಂಡಳು ಬಸವಣ್ಣಿ.